# Provident Skyworth housing projct begins

Publication: Vaartha Bharti, Edition: Bangalore, Reporter: Bureau, Published Dt.: 17 Feb 2013, Page No.: 12

## ಪ್ರಾವಿಡೆಂಟ್ ಸ್ಕೈವರ್ತ್ ವಸತಿ ಯೋಜನೆಗೆ ಚಾಲನೆ



ಪ್ರಾವಿಡೆಂಟ್ ಹೌಸಿಂಗ್ ಲಿ. ಸಂಸ್ಥೆಯ ಯೋಜನಾ ಮಾಹಿತಿ ಕೇಂದ್ರ ಮತ್ತು ಬುಕ್ಕಿಂಗ್ ಕೇಂದ್ರವನ್ನು ಪುರವಂಕರ ಕಂಪೆನಿಯ ಅಧ್ಯಕ್ಷ ರವಿ ಪುರವಂಕರ ಹಾಗೂ ಉದ್ಯಮಿ ರಮೇಶ್ ಕುಮಾರ್ ಶನಿವಾರ ಚಾಲನೆ ನೀಡಿದರು.

ಮಂಗಳೂರು, ಫೆ.16: ಪುರವಂಕರ ಪ್ರಾಜೆಕ್ಟ್ಸ್ ಲಿ.ನ ಸಂಪೂರ್ಣ ಮಾಲಕತ್ವಕ್ಕೆ ಒಳಪಟ್ಟ ಅಂಗಸಂಸ್ಥೆಯಾದ ಪ್ರಾವಿಡೆಂಟ್ ಹೌಸಿಂಗ್ ಲಿ. ಸಂಸ್ಥೆಯ ಯೋಜನಾ ಮಾಹಿತಿ ಕೇಂದ್ರ ಮತ್ತು ಬುಕ್ಕಿಂಗ್ ಕೇಂದ್ರವನ್ನು ದೀಪ ಬೆಳಗಿಸಿ ಉದ್ಘಾಟಿಸುವ ಮೂಲಕ 'ಸ್ಕೈವರ್ತ್' ವಸತಿ ಯೋಜನೆಗೆ ಪುರುವಂಕರ ಕಂಪೆನಿಯ ಅಧ್ಯಕ್ಷ ರವಿ ಪುರವಂಕರ ಹಾಗೂ ಉದ್ಯಮಿ ರಮೇಶ್ ಕುಮಾರ್ ಶನಿವಾರ ಚಾಲನೆ ನೀಡಿದರು.

ಪ್ರಾವಿಡೆಂಟ್ ಹೌಸಿಂಗ್ ಲಿ.ನ ಆಡಳಿತ ನಿರ್ದೇಶಕ ವಿ.ಮಧು ಸ್ವಾಗತಿ ಸಿದರು. ಸಂಸ್ಥೆಯ ತಾಂತ್ರಿಕ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು, ಮಂಜುನಾಥ್, ಮಾರುಕಟ್ಟೆ ವಿಭಾಗದ ಉಪಾಧ್ಯಕ್ಷ ದೇವಾನಂದ ಪಾಟಿ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ರಾಷ್ಟ್ರೀಯ ಹೆದ್ದಾರಿಗೆ ಸಮೀಪವಾಗಿ ರುವ ದೇರೆಬೈಲು, ಕೊಂಚಾಡಿ (ವಿಮಾನ ನಿಲ್ದಾಣ ರಸ್ತೆ)ಯ ಎತ್ತರದ ಪ್ರದೇಶದಲ್ಲಿ ಈ ನೂತನ ಸ್ಕೈವರ್ತ್ ನಿರ್ಮಾಣಗೊಳ್ಳ ಲಿದೆ. ಮೇಲ್ದರ್ಜೆ ವಸತಿ ಸಂಕೀರ್ಣಗಳ ನಿರ್ಮಾಣ ಕ್ಷೇತ್ರದ ಖ್ಯಾತರಾಗಿರುವ ಪುರವಂಕರ ಸಮೂಹ 2008ರಲ್ಲಿ ಪ್ರಾವಿಡೆಂಟ್ ಸಂಸ್ಥೆಯನ್ನು ಆರಂಭಿಸಿ ಗ್ರಾಹಕರಿಗೆ ಮಿತ ದರದಲ್ಲಿ ಗುಣಮಟ್ಟದ ಮನೆ ಗಳನ್ನು ನಿರ್ಮಿಸಿಕೊಡುತ್ತಿದೆ.

ಪ್ರಾವಿಂಡೆಂಟ್ ಬ್ರಾಂಡ್‌ನ ವಸತಿ ಸಂಕೀರ್ಣದ ಮನೆಗಳು ಮೇಲ್ದರ್ಜೆ ಶ್ರೇಣಿ-ಕೈಗೆಟಕುವ ದರ (ಪ್ರೀಮಿಯಂ ಅಫೋರ್ಡೆಬಲ್) ಎಂಬ ಕಲ್ಪನೆ ಯೊಂದಿಗೆ ನಿರ್ಮಾಣಗೊಳ್ಳಲಿದೆ. ಇಲ್ಲಿ ಕಟ್ಟಡ ನಿರ್ಮಾಣದ ವೆಚ್ಚ ಕಡಿತಕ್ಕೆ ತಂತ್ರಜ್ಞಾನವನ್ನು ಸಮರ್ಥ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತದೆ. ಪ್ರಾವಿಡೆಂಟ್ ಬ್ರಾಂಡ್ ಮನೆಗಳು ರಿಯಲ್ ಎಸ್ಟೇಟ್ ಕ್ಷೇತ್ರದ ಇತರ ಸ್ಪರ್ಧಿಗಳ ಮನೆಗಳಿಗಿಂತ ಶೇ.25ರಿಂದ 30ರಷ್ಟು ಕಡಿಮೆ ದರದಲ್ಲಿ ಗ್ರಾಹಕರಿಗೆ ಲಭ್ಯವಾಗ ಲಿದೆ ಎಂದು ಸಂಸ್ಥೆಯ ಪ್ರಕಟನೆ ತಿಳಿಸಿದೆ.

ದೇಶದ ವಿವಿಧ ಕಡೆಗಳಲ್ಲಿ 15 ಸಾವಿರ ಮನೆಗಳನ್ನು ನಿರ್ಮಿಸಿ 50,000 ಸಂತೃಪ್ತ ಗ್ರಾಹಕರನ್ನು ಹೊಂದಿರುವ ಪುರವಂಕರ ಕಂಪೆನಿ ಕಳೆದ 37 ವರ್ಷಗಳಿಂದ ನಿರ್ಮಾಣ ಕ್ಷೇತ್ರದಲ್ಲಿ ತೊಡಗಿ ಕೊಂಡಿದ್ದು, ಕಳೆದ ನಾಲ್ಕು ವರ್ಷಗಳಲ್ಲಿ ಸಹ ಸಂಸ್ಥೆ ಯಾದ ಪ್ರಾವಿಡೆಂಟ್ ನಾಲ್ಕು ಯೋಜನೆಗಳನ್ನು ಸಂಪೂರ್ಣಗೊಳಿಸಿ 5,000 ಮನೆಗಳನ್ನು ಗ್ರಾಹಕರಿಗೆ ನಿರ್ಮಿಸಿ ಕೊಟ್ಟಿದೆ.

ಸ್ಕೈವರ್ತ್ ವಸತಿ ಸಮುಚ್ಚಯವು 12 ಮಹಡಿ ಗಳನ್ನು ಹೊಂದಿರಲಿದ್ದು, 4.15 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ 2 ಮತ್ತು 3 ಬೆಡ್‌ರೂಂ ಗಳ 324 ಮನೆ ಗಳನ್ನು ಒಳಗೊಂಡಿರುತ್ತದೆ. ಎತ್ತರದ ಪ್ರದೇಶದಲ್ಲಿ ತಲೆ ಎತ್ತಲಿರುವ 'ಸ್ಕೈವರ್ತ್'ನ ಸುತ್ತಲೂ ಸುಂದರ ಪ್ರಾಕೃತಿಕ ಸೌಂದರ್ಯ ವಿರುತ್ತದೆ. 2 ಬೆಡ್‌ರೂಂಗಳ 1,091 ಚದರ ಅಡಿ ವಿಸ್ತೀರ್ಣದ ಮನೆಗಳು 39.22 ಲಕ್ಷ ರೂ.ಗೆ ಹಾಗೂ 3 ಬೆಡ್‌ರೂಂಗಳ 1,377 ಚದರಡಿ ವಿಸ್ತೀರ್ಣ ಮನೆಗಳು 48.07 ಲಕ್ಷ ರೂ.ಗೆ (ಕಾರು ಪಾರ್ಕಿಂಗ್ ಸಹಿತ) ಲಭ್ಯವಿದೆ. ಈ ಆಧುನಿಕ ಶೈಲಿಯ ವಸತಿ ಸಂಕೀರ್ಣ ಯೋಜನೆ ಈಗಾಗಲೇ ಬೆಂಗಳೂರು, ಚೆನ್ನೈನಲ್ಲಿ ಯಶಸ್ವಿಯಾ ಗಿದ್ದು, ಈಗ ಮಂಗಳೂರಿಗೆ ಕಾಲಿಟ್ಟಿದೆ. ಮೈಸೂರು, ಮುಂಬೈ, ದಿಲ್ಲಿ, ಹೈದರಾ ಬಾದ್, ಕೊಯಮತ್ತೂರು, ಪುಣೆ, ಬರೋಡ, ಅಹ್ಮದಾಬಾದ್, ಕೋಲ್ಕತ್ತ, ನಾಗಪುರ ಮತ್ತು ಜೈಪುರದಲ್ಲೂ ಇದೇ ಶೈಲಿಯ ಯೋಜನೆಗಳನ್ನು ಪ್ರಾವಿ ಡೆಂಟ್ ಮುಂಬರುವ ದಿನಗಳಲ್ಲಿ ನಿರ್ಮಿಸಲಿದೆ ಎಂದು ಪ್ರಕಟನೆ ತಿಳಿಸಿದೆ.